CARUM

Campaign for Awareness on Responsible Use of Medicines

# ಅಲೋಪಥಿಕ್ ಮತ್ತು ಇತರೆ ಔಷಧಿಗಳು



## ಔಷಧಿ ಎಂದರೆ ಏನು?

- ಔಷಧಿಗಳು ಎಂದರೆ, ಯಾವುದೇ ವಸ್ತು ರೋಗವನ್ನು ತಡೆಯಲು/ರೋಗ ವಾಸಿಮಾಡಲು/ರೋಗ ನಿರೋದಕ ಶಕ್ತಿಯನ್ನು ಹೆಚ್ಚಿಸಲು ಬಳಸುವಂತದು.
- ರೋಗದ ಸಮಯದಲ್ಲಿ ಶರೀರವು ತನ್ನ ಕೆಲಸಗಳನ್ನು ಸಾಮಾನ್ಯವಾಗಿ ನಿರ್ವಹಿಸಲು ಸಹಾಯ ಮಾಡುವಂತಹುದು.
- ಔಷಧಿ ಎಂದರೆ ರೋಗದ ಸಮಯದಲ್ಲಿ ನಮ್ಮ ದೈಹಿಕ ಸಾಮರ್ಥ್ಯ ಹೆಚ್ಚಿಸುವಂತಹುದು.

## ವೈದ್ಯರ ಚೀಟಿಯ ಹೊರತಾಗಿ ಮಾರಲ್ಪಡುವ ಔಷಧಿಗಳು! OTC ಔಷಧಿಗಳು

- **OTC** ಔಷಧಿಗಳು: ವೈದ್ಯರ ಚೀಟಿಯ ಹೊರತಾಗಿ ವೈದ್ಯರ ಆದೇಶವಿಲ್ಲದೆ ಔಷಧ ತಜ್ಞರು ಕೂಡ ಶಿಫಾರಸು ಮಾಡಬಹುದಾದ ಔಷಧಿಗಳು.
- **OTC** ಔಷಧಿಗಳು ಸುರಕ್ಷಿತವಾದವು ಎಂದು ಪ್ರಮಾಣೀಕರಿಸಲ್ಪಟ್ಟಿವೆ ಮತ್ತು ಸರಿಯಾದ ರೀತಿಯಲ್ಲಿ ಬಳಸಿಲ್ಲವಾದರೆ ಇವುಗಳು ಕೂಡ ಅಡ್ಡ ಪರಿಣಾಮಗಳನ್ನು ಉಂಟುಮಾಡಬಲ್ಲವು.
  ಉದಾ: ಪ್ಯಾರಸಿಟಮಾಲ್, ಆಸ್ಪಿರಿನ್, ವಿಟಮಿನ್ಸ್, ನಂಜುನಿರೋದಕ ಔಷಧಿಗಳು ಮತ್ತು ಖನಿಜಯುಕ್ತ ಔಷಧಿಗಳು

## ವೈದ್ಯರ ಚೀಟಿಯ ಮೇರೆಗೆ ಬಳಸುವ ಔಷಧಿಗಳು

- ಈ ಔಷಧಿಗಳನ್ನು ನೋಂದಾಯಿತ ವೈದ್ಯರ ಚೀಟಿಯ ಮೇರೆಗೆ ಮಾತ್ರ ವಿತರಿಸುವುದು/ಶಿಫಾರಸು ಮಾಡುವುದು. ಔಷಧ ತಜ್ಞರಾಗಲಿ ಇನ್ನಿತರ ಯಾರಿಂದಲೂ ವೈದ್ಯರ ಅನುಮತಿಯಿಲ್ಲದೆ ಬಳಸುವುದು/ಶಿಫಾರಸು ಮಾಡುವುದು ಕಾನೂನಿನ ಉಲ್ಲಂಘನೆ. ಈ ಔಷಧಿಗಳನ್ನು ಸ್ವಹಿಚ್ಚೆಯಿಂದ ಬಳಸುವುದು ಅಪಾಯಕರ.
- ಈ ಗುಂಪಿನ ಎಲ್ಲಾ ಔಷಧಿಗಳನ್ನು **Rx** ಎಂದು ಮತ್ತು ಕೆಲವು ಔಷಧಿಗಳನ್ನು **NRx** ಎಂತಲೂ ಕೆಂಪು ಶಾಹಿಯಲ್ಲಿ ಔಷಧ ಡಬ್ಬದ ಮೇಲೆ ಎಡಗಡೆಯಲ್ಲಿ ಗುರುತಿಸುರುತ್ತಾರೆ. Schedule H/H1/X: Warning : To be sold by retail on the prescription of a Registered Medical Practitioner only
- ಈ ಗುಂಪಿನ ಕೆಲವು ಔಷಧಿಗಳನ್ನು ಷೆಡ್ಯೂಲ್ **'G'** ಔಷಧಿಗಳೆಂದು ವರ್ಗೀಕರಿಸಲಾಗಿದೆ. ಇವು ಅಪಾಯಕಾರಿ ಹಾಗಾಗಿ ನುರಿತ ವೈದ್ಯರ ಉಪಸ್ಥಿತಿಯಲ್ಲಿ ಮಾತ್ರ ಬಳಸಬೇಕು. ಉದಾ: ಇನ್ಸುಲೀನ್, ಮೆಟ್‌ಫಾರ್ಮಿನ್
- ಕೆಲವೊಂದು ಔಷಧಿಗಳನ್ನು ಷೆಡ್ಯೂಲ್ **'X'** ನಲ್ಲಿ ಗುಂಪಿಕರಿಸಲಾಗಿದೆ. ಇವುಗಳು ವ್ಯಸನಕ್ಕೆ ಕಾರಣವಾಗುವಂತಹುವು ಮತ್ತು ಮಾದಕ ದ್ರವ್ಯಗಳು, ಇಂತಹ ಔಷಧಿಗಳನ್ನು **'XRx'** ಎಂದು ಔಷದ ಡಬ್ಬದ ಮೇಲೆ ಎಡಗಡೆಯಲ್ಲಿ ಕೆಂಪು ಶಾಹಿಯಿಂದ ಗುರುತಿಸುರುತ್ತಾರೆ.
- ಷೆಡ್ಯೂಲ್ **'X'** ಔಷಧಿಗಳನ್ನು ಕಡ್ಡಾಯವಾಗಿ ವೈದ್ಯರ ದ್ವಿಪ್ರತಿ ಆದೇಶದ ಮೇರೆಗೆ ವಿತರಿಸುವುದು ಹಾಗೂ ಔಷಧ ವಿತರಣೆಯ ನಂತರ ಒಂದು ಪ್ರತಿಯನ್ನು ಔಷಧ ತಜ್ಞರು ತಮ್ಮಲ್ಲಿ ಉಳಿಸಿಕೊಳ್ಳುವುದು ಕಡ್ಡಾಯ.

Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

Campaign for Awareness on Responsible Use of Medicines

# ಔಷಧಗಳ ವೈವಿದ್ಯತೆ ಮತ್ತು ಸ್ವರೂಪಗಳು

**1. ಬಾಯಿಯಲ್ಲಿ ಮತ್ತು ಬಾಯಿಯ ಮೂಲಕ ಸೇವಿಸುವ ಔಷಧಗಳು**

**ಮಾತ್ರೆಗಳು/ ಗುಳಿಗೆಗಳು**

ಇಡಿಯಾಗಿ ನುಂಗುವ ಮಾತ್ರೆಗಳು, ಅಗಿದು ನುಂಗುವ ಗುಳಿಗೆಗಳು, ನೀರಿನಲ್ಲಿ ಕರಗಿಸಿ ಕುಡಿಯುವಂಥ ಗುಳಿಗೆಗಳು,
ಬಾಯಿಯಲ್ಲಿ ಚೀಪುವ ಗುಳಿಗೆಗಳು,
**ದ್ರವರೂಪದ ಔಷಧಿ / ದ್ರವೌಷಧ,** ಮುಂತಾದವು.,



**ಮಾತ್ರೆಗಳು/ ಗುಳಿಗೆಗಳು ಮತ್ತು ಅಗಿದು ನುಂಗುವ ಗುಳಿಗೆಗಳು**



**ಕ್ಯಾಪ್ಸೂಲ್‌ಗಳು**



**ದ್ರವರೂಪದ ಔಷಧಿ / ದ್ರವೌಷಧಗಳು**



**ಚೀಪುವ ಮಾತ್ರೆಗಳು ಮತ್ತು ಬಾಯಿಯಲ್ಲಿ ಕರಗುವ ಮಾತ್ರೆಗಳು**

**2. ಹೊರಮೈಗೆ ಲೇಪಿಸುವ / ಬಾಹ್ಯ ಔಷಧಿಗಳು**

ಮುಲಾಯಮುಗಳು, ಲೋಷನ್, ಕ್ರೀಮ್.,

ಕಣ್ಣು, ಕಿವಿ ಮತ್ತು ಮೂಗಿನಲ್ಲಿ ಬಳಸುವ ಔಷಧಿಗಳು

ಯೋನಿ ಮತ್ತು ಗುದದ್ವಾರದಲ್ಲಿ ಬಳಸುವ ಔಷಧಿಗಳು




**ಮುಲಾಯಮುಗಳು, ಲೋಷನ್ ಮತ್ತು ಕ್ರೀಮ್‌ಗಳು.,**



**ಪುಡಿ ಔಷಧಿಗಳು/ ಪೌಡರ್‌ಗಳು**



ಕಣ್ಣಿನಲ್ಲಿ ಬಳಸುವ ಔಷಧಿಗಳು



**ಯೋನಿ ಮತ್ತು ಗುದದ್ವಾರದಲ್ಲಿ ಬಳಸುವ ಔಷಧಿಗಳು**

**3. ಸೂಜಿ ಮದ್ದು / ಇಂಜೆಕ್ಷನ್‌ಗಳು**

ರಕ್ತನಾಳಗಳಲ್ಲಿ ಸೂಜಿಯ ಮೂಲಕ ಅಳವಡಿಸುವುದು,

ಶ್ವಾಸನಾಳ/ಉಸಿರಾಟದ ಮೂಲಕ ಸೇವಿಸುವುದು, ನಾಲಿಗೆಯ ಕೆಳಗಣ ಬಳಸುವಂಥವು



**ಬಾಯಿ ಮುಕ್ಕಳಿಸುವ ಔಷಧಿಗಳು**



**ಸೂಜಿ ಮದ್ದು / ಇಂಜೆಕ್ಷನ್‌ಗಳು**



**ಮೂಗಿನಲ್ಲಿ ಬಳಸುವ ಔಷಧಿಗಳು**




**ಶ್ವಾಸನಾಳ/ ಬಾಯಿಯಲ್ಲಿ ಉಸಿರಾಟದ ಮೂಲಕ ಸೇವಿಸುವ ಔಷಧಿಗಳು**

Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

Campaign for Awareness on Responsible Use of Medicines

# ವೈದ್ಯರ ಚೀಟಿಯ ಪ್ರಾಮುಖ್ಯತೆ ಮತ್ತು ಮಹತ್ವ




## ಔಷಧ ಚೀಟಿಯು ಶಾಸನಬದ್ದ ಪ್ರಮಾಣ ಪತ್ರ

1. ಔಷಧ ಚೀಟಿಯು ವೈದ್ಯರು / ದಂತ ವೈದ್ಯರು ರೋಗಿಗಳಿಗೆ ಬಳಸುವ ಆಜ್ಞಪತ್ರ. ಔಷಧ ತಜ್ಞರು / ಪಾರ್ಮಸಿಸ್ಟ್‌ಗಳು ಗೌರವಪೂರ್ವಕವಾಗಿ ಸ್ವೀಕರಿಸಿ ವೈದ್ಯರು ಆದೇಸಿಸಿದ ಔಷಧಿಗಳನ್ನು ವಿತರಿಸುವ ದಾಖಲೆ ಪತ್ರ.
2. ಔಷಧ ಚೀಟಿಯು ಔಷಧಗಳ ಪಟ್ಟಿಯಲ್ಲದೇ, ಔಷಧಿಯ ಪ್ರಮಾಣ, ಪ್ರಭಾವ, ಪರಿಣಾಮ ಮತ್ತು ಅಗತ್ಯವಾದ ಸಲಹೆ ಸೂಚನೆಗಳನ್ನು ಒಳಗೊಂಡಿರುತ್ತದೆ. ಹಾಗಾಗಿ ಔಷಧ ಚೀಟಿಯಿಲ್ಲದೇ, ಔಷಧಿಯ ಖರೀದಿಯ ಕ್ರಮ ಸರಿಯಲ್ಲ.
3. ಪ್ರತಿ ಔಷಧವು ವಿವಿಧ ಸ್ವರೂಪ, ನಮೂನೆ, ವಿವಿಧ ಔಷಧಿಗಳ ಸಂಯೋಗದಲ್ಲಿ ವಿವಿಧ ಶಕ್ತಿಗಳಲ್ಲಿ ಮತ್ತು ಒಂದೇ ಹೆಸರಿನಲ್ಲಿ ದೊರೆಯಬಹುದು. ಆದ್ದರಿಂದ ಪ್ರತಿ ಬಾರಿಯು ಔಷಧ ಖರೀದಿಯಲ್ಲಿ ಇತ್ತೀಚಿನ ಔಷಧ ಚೀಟಿಯನ್ನು ಪ್ರಸ್ತುತ ಪಡಿಸುವುದು ಅವಶ್ಯಕ.
4. ಔಷಧ ಚೀಟಿಯು ವೈದ್ಯರ ಶಿಪಾರಸು ಮಾಡಿದ ಔಷಧಿಗಳನ್ನು ವಿತರಿಸಲು ಔಷಧ ತಜ್ಞರಿಗೆ ಸಹಕಾರಿಯಾಗಬಲ್ಲದು.
5. ಔಷಧಿಯ ಸುರಕ್ಷಿತ ಸೇವನೆಗೆ ಮತ್ತು ಉತ್ತಮ ಆರೋಗ್ಯಕ್ಕಾಗಿ ವೈದ್ಯರು ಔಷಧ ತಜ್ಞರೊಂದಿಗಿನ ಸಮಾಲೋಚನೆ ಬಹಳ ಉಪಯುಕ್ತ.

## ಔಷಧಿ ಪಡೆಯುವಲ್ಲಿ ಈ ಕೆಳಗಿನ ಯಾವುವು ಸರಿಯಾದ ಕ್ರಮವಲ್ಲ ಮತ್ತು ಆಪಾಯಕರ !

1. ಔಷಧಿಯ ಹೆಸರು ಹೇಳುವ ಮೂಲಕ
2. ಔಷಧಿಯ ಹಳೆಯ ಬಾಟಲಿಗಳು / ಡಬ್ಬಗಳು / ಪ್ಯಾಕ್‌ಗಳನ್ನು ತೋರಿಸುವುದು.
3. ಔಷಧಿಯ ಹೆಸರು ಬರೆದು ಕೊಡುವುದು.
4. ಔಷಧಿಯ ಬಣ್ಣ ತೋರಿಸುವ ಮೂಲಕ
5. ಮೊಬೈಲ್ ಪೋನ್‌ಗಳಲ್ಲಿನ ಸಂದೇಶವನ್ನು ತೋರಿಸುವುದು.

**"ಪ್ರತಿಬಾರಿ ಔಷಧಿ ಅಂಗಡಿಗೆ (ಪಾರ್ಮಸಿ) ಬೇಟಿ ನೀಡಿದಾಗ ತಪ್ಪದೇ ಇತ್ತೀಚಿನ ಔಷಧ ಚೀಟಿಯನ್ನು ಕೊಂಡೊಯ್ಯುವುದು"**


Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

CARUM
Campaign for Awareness on Responsible Use of Medicines

# ಔಷಧ ಖರೀದಿಸುವ ಸಂದರ್ಭ






**“ಸರಿಯಾದ ಔಷಧ ಸೇವಿಸಿ ಹಾಗೂ ಸುರಕ್ಷಿತವಾಗಿರಿ”**

| | |
|---|---|
| ಔಷಧ (ಪಾರ್ಮಸಿ) ಅಂಗಡಿಯ ಪರೀಶಿಲನೆ | • ಪ್ರತಿಬಾರಿ ಅಧಿಕೃತ ಪಾರ್ಮಸಿಯಿಂದಲೇ ಔಷಧಿಗಳನ್ನು ಖರೀದಿಸುವುದು<br>• ಪಾರ್ಮಸಿಯು ಔಷಧ ಸಂಗ್ರಹ ಮತ್ತು ಮಾರಾಟಕ್ಕೆ ಅಗತ್ಯವಾದ ಪರವಾನಿಗೆ ಹೊಂದಿರುವುದನ್ನು ಖಚಿತ ಪಡಿಸಿಕೊಳ್ಳಿ.<br>• ಅನಧಿಕೃತ ಮಾರಾಟಗಾರರಿಂದ ಔಷಧ ಖರೀದಿ ಅಪಾಯಕರ ಮತ್ತು ಅಪರಾದ. |
| ಔಷಧಿ ಖರೀದಿಯಲ್ಲಿ ಇತ್ತೀಚಿನ ಔಷಧ ಚೀಟಿಯ ಪ್ರಾಮುಖ್ಯತೆ | • ಪ್ರತಿ ಔಷಧ ಖರೀದಿಯಲ್ಲಿ ಇತ್ತೀಚಿನ ಚೀಟಿಯನ್ನು ಬಳಸುವುದು.<br>• ವೈದ್ಯರು ಹೇಳದ ಹೊರತು ಯಾವುದೇ ಹಳೆಯ ಔಷಧ ಚೀಟಿಯನ್ನು ಔಷಧ ಖರೀದಿಗೆ ಬಳಸುವುದು ಅಪಾಯಕಾರಿ<br>• ಔಷಧಿಗಳ ಶೀಘ್ರ ವಿತರಣೆಗೆ ಒತ್ತಡ ಹೇರುವುದು ಸಲ್ಲದು. ಇದರಿಂದ ಔಷಧಿ ವಿತರಣೆಯಲ್ಲಿ ಲೋಪವುಂಟಾಗಬಹುದು.<br>• ನಿಮ್ಮ ಔಷಧವನ್ನು ಔಷಧ ತಜ್ಞರೇ ವಿತರಿಸುವುದನ್ನು ಖಚಿತ ಪಡಿಸಿಕೊಳ್ಳಿ. |
| ವೈದ್ಯರು ಮತ್ತು ಔಷಧ ತಜ್ಞರೊಡನೆ ಸಮಾಲೋಚನೆ | • ಔಷಧ ಸೇವನೆಗೆ ಅಗತ್ಯವಾದ ಸಲಹೆ, ಸೂಚನೆ ಮತ್ತು ಮುನ್ನೆಚ್ಚರಿಕೆಗಳನ್ನು ಕೇಳಿ ತಿಳಿಯುವುದು.<br>• ಔಷಧದ ಹೆಸರು, ಸಾಮರ್ಥ್ಯ, ಸ್ವರೂಪ ಮತ್ತು ಪ್ರಮಾಣ ಸರಿಯಾಗಿದೆಯೇ ಪರಿಶೀಲಿಸಿ ಹಾಗೂ ಅವಧಿ ಮೀರದ ಔಷಧಿಗಳೆಂದು ಖಚಿತ ಪಡಿಸಿಕೊಳ್ಳಿ<br>• ಔಷಧ ಚೀಟಿಗೆ ಹೊರತಾದ ಔಷಧ ಖರೀದಿಯ ಮುನ್ನ ಔಷಧ ತಜ್ಞರೊಡನೆ ಸಮಾಲೋಚನೆ ಅತ್ಯಗತ್ಯ. |
| ಖರೀದಿಸಿದ ಔಷಧಿಗಳ ಪರಿಶೀಲನೆ | • ವೈದ್ಯರು ಶಿಪಾರಸ್ಸು ಮಾಡಿದ ಔಷಧಿಗಳನ್ನು ಖರೀದಿಸುವಿರೆಂದು ಖಚಿತ ಪಡಿಸಿಕೊಳ್ಳಿ.<br>• ಔಷಧ ಖರೀದಿಗಳ ಬಿಲ್ಲುಗಳನ್ನು ಕೇಳಿ ಪಡೆಯಿರಿ ಮತ್ತು ನಿಗದಿತ ಹಣ / ಗರಿಷ್ಟ ಮುಖ ಬೆಲೆಗಿಂತ ಹೆಚ್ಚಿಗೆ ಪಾವತಿಸಿಲ್ಲವೆಂದು ದೃಢಪಡಿಸಿಕೊಳ್ಳಿ<br>• ಸೋರಿಕೆ, ಹಾನಿಯಾಗಿರುವುದು ಅಥವಾ ಒಡೆದಿರುವುದು ಕಂಡುಬಂದಲ್ಲಿ ಅಂಥಹ ಔಷಧಿಗಳನ್ನು ತಿರಸ್ಕರಿಸಿ. |

## BE SAFE BE SURE

Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

CARUM
Campaign for Awareness on Responsible Use of Medicines



# ದ್ರವೌಷಧಗಳ ಸೇವನೆಗೆ ಮಾರ್ಗಸೂಚಿಗಳು

**ಸುರಕ್ಷಿತ ಔಷಧ ಸೇವನೆಗೆ ಉಪಯುಕ್ತ ಸಲಹೆಗಳು**

1

## ದ್ರವೌಷಧಗಳು

**ದ್ರವೌಷಧಗಳ ರೀತಿ:** ಸಿರಪ್, ದ್ರವ್ಯ ಲೇಹ್ಯ, ಎಲಿಕ್ಸರ್, ಸಸ್‌ಪೆನ್ಷನ್, ಮುಂತಾದವು.,

- ಬಾಯಿ ಮುಖೇನ ಸೇವಿಸುವ ದ್ರವೌಷಧಗಳು ಸಾಮಾನ್ಯವಾಗಿ ಸಿಹಿಯಾಗಿರುತ್ತವೆ. ಅವುಗಳನ್ನು ವೈದ್ಯರ ನಿರ್ದೇಶನದ ಮೇರೆಗೆ ನಿರ್ದಿಷ್ಟವಾದ ಪ್ರಮಾಣದಲ್ಲಿ ಅಳೆದು ಸೇವಿಸುವುದು ಕ್ಷೇಮಕರ.
- ಯಾವುದೇ ದ್ರವೌಷಧವನ್ನು ನಿರ್ದಿಷ್ಟವಾದ ಪ್ರಮಾಣದಲ್ಲಿ ಅಳೆದು ಸೇವಿಸಲು ಔಷಧ ಅಳೆಯುವ ಸಾಧನಗಳನ್ನು ಬಳಸಬೇಕು.
- ವೈದ್ಯರ ಸಕಹೆ ಶಿಪಾರಸ್ಸಿನ ಹೊರತಾಗಿ ಔಷಧಗಳನ್ನು ಜೇನುತುಪ್ಪ ಅಥವಾ ನೀರು ಮುಂತಾದ ಯಾವುದೇ ವಸ್ತುವಿನೊಡನೆ ಬೆರೆಸಿ ಕುಡಿಯಬಾರದು, ಸ್ವಯಂ ಚಿಂತನೆಯಿಂದ ಹಾಗೆ ಮಾಡುವುದರಿಂದ ಔಷಧ ಶಕ್ತಿಯು ಕುಂದುವುದು.

2

## ದ್ರವೌಷಧಗಳ ಸೇವನೆಗೆ ಮೊದಲು...

- ಸಾಮಾನ್ಯವಾಗಿ ದ್ರವೌಷಧಗಳು ಒಂದಕ್ಕಿಂತ ಹೆಚ್ಚು ಡೋಸ್‌ಗಳನ್ನು ಒಳಗೊಂಡಿರುತ್ತದೆ. ಪ್ರತಿಬಾರಿಯು ನಿರ್ದಿಷ್ಟವಾದ ಪ್ರಮಾಣದಲ್ಲಿಯೆ ಸೇವಿಸಬೇಕು.
- ದ್ರವೌಷಧಗಳನ್ನು ಸೇವಿಸುವ ಮೊದಲು 2 ಅಥವಾ 3 ಬಾರಿ ಕುಲುಕಿ ಪ್ರಮಾಣದಲ್ಲಿ ಅಳೆದು ಕುಡಿಯುವುದರಿಂದ ಉತ್ತಮ ಪಲಿತಾಂಶ ಪಡೆಯಬಹುದು.
- ಯಾವುದೇ ಸಂದರ್ಭದಲ್ಲೂ ಔಷಧ ಬಾಟಲಿಯ ಮುಚ್ಚಳ ಅಥವಾ ಗೃಹಬಳಕೆಯ ಚಮಚಗಳನ್ನು ಔಷಧ ಅಳತೆಗೆ ಬಳಸಬಾರದು.

3

## ಇದು ನಿಮಗೆ ತಿಳಿದಿರಲಿ!

- ಕೆಲವು ದ್ರವೌಷಧಗಳು ಒಣಪುಡಿಯ ರೂಪದಲ್ಲಿರುತ್ತದೆ. ಈ ಒಣಪುಡಿಯನ್ನು ಸಾಮಾನ್ಯವಾಗಿ ನೀರನ್ನು ಬೆರೆಸಿ ದ್ರವೌಷಧವಾಗಿ ಮಾರ್ಪಡಿಸಿ ಸೇವಿಸಬೇಕು.
- ಮೊದಲಿಗೆ ಒಣಪುಡಿ ಹೊಂದಿರುವ ಬಾಟಲಿಯನ್ನು ಕುಲಕಿ ಅಲ್ಲಾಡಿಸಿ ನಂತರ ಮುಚ್ಚಳಚನ್ನು ತೆಗಿಯಿರಿ
- ಬಾಟಲಿಯ ಮೇಲೆ ಗುರುತು ಮಾಡಿದ ಮಟ್ಟಕ್ಕೆ ಕುದಿಸಿ ಆರಿಸಿದ ನೀರನ್ನು ತುಂಬಿ ಮುಚ್ಚಳವನ್ನು ಬಿಗಿಯಾಗಿ ಹಾಕಿ
- ಘನಸ್ಥಿತಿ ಔಷಧವು ದ್ರವೌಷಧವಾಗಿ ಮಾರ್ಪಾಡು ಹೊಂದುವವರೆಗೆ ಜೋರಾಗಿ ಕುಲಕಿ. ಈ ರೀತಿ ಮಾರ್ಪಾಡು ಹೊಂದಿದ ದ್ರವೌಷಧವನ್ನು ಸಾಮಾನ್ಯವಾಗಿ 3 ರಿಂದ 7 ದಿನಗಳಲ್ಲಿ ಅಥವಾ ವೈದ್ಯರು ಸೂಚಿಸಿದಂತೆ ಸೇವಿಸಬೇಕು.
- ಈ ಔಷಧವು ಸುಭದ್ರ ಸ್ಥಿತಿಯಲ್ಲಿರಲು ಮತ್ತು ಹಾನಿಗೊಳಗಾಗದಂತೆ ತಡೆಯಲು ಶೀತಲ ಯಂತ್ರದಲ್ಲಿ (ರೆಫ್ರಿಜರೇಟರ್‌ಗಳಲ್ಲಿ) ಸಂಗ್ರಹಿಸುವುದು ಉತ್ತಮ.

Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

Campaign for Awareness on Responsible Use of Medicines

# ಮಾತ್ರೆಗಳನ್ನು

## ಸೇವಿಸುವಾಗ !



**ನುಂಗುವ ಮಾತ್ರೆಗಳು: ಇಡೀ ಒಂದು ಮಾತ್ರೆಯನ್ನು ನೀರಿನ ಜೊತೆ ನುಂಗಬೇಕು.**

- ✓ ಒಂದು ಮಾತ್ರೆಯನ್ನು ನುಂಗುವಾಗ ಅದನ್ನು ಮುರಿಯುವುದಾಗಲಿ ಅಗಿದು ತಿನ್ನುವುದಾಗಲೀ ಮಾಡಬಾರದು.
- ✓ ವೈದ್ಯರು ಅಥವಾ ಔಷಧತಜ್ಞರು ಹೇಳಿದರೆ ಮಾತ್ರ ಹಾಗೆ ಮಾಡಬೇಕು.
- ✓ ಮಲಗಿಕೊಂಡು ಮಾತ್ರೆಗಳನ್ನು ನುಂಗುವುದು ಒಳ್ಳೆಯದಲ್ಲ.

**ಕರಗುವ ಮಾತ್ರೆಗಳು (ನುಂಗಬಾರದು):** ಇಂತಹ ಮಾತ್ರೆಗಳನ್ನು ಒಂದು ಲೋಟದಲ್ಲಿ ಇಟ್ಟು 5 ರಿಂದ 10ml ನೀರು ಹಾಕಬೇಕು. ಮಾತ್ರೆಗಳು ಸಂಪೂರ್ಣವಾಗಿ ನೀರಿನಲ್ಲಿ ಕರಗಿದ ನಂತರ ಅದನ್ನು ಸಂಪೂರ್ಣವಾಗಿ ಸೇವಿಸಬೇಕು.

**ಚೀಪುವ ಮಾತ್ರೆಗಳು:** ಇಂತಹ ಮಾತ್ರೆಗಳನ್ನು ಬಾಯಿಯಲ್ಲಿ ಹಾಕಿಕೊಂಡು, ಚೆನ್ನಾಗಿ ಪುಡಿಯಾಗುವವರೆಗೂ ಅಗಿದು ನಂತರ ನುಂಗಬೇಕು.

**ಬಾಯಿಯಲ್ಲಿ ಕರಗುವ ಮಾತ್ರೆಗಳು (ಹಿಡಿಯಾಗಿ ನುಂಗಬಾರದು):** ಇಂತಹ ಮಾತ್ರೆಗಳನ್ನು ಬಾಯಿಯಲ್ಲಿ ಹಾಕಿಕೊಂಡು, ಅಗಿಯದೆ ಮೆಲ್ಲುತ್ತಾ ಕರಗಿರುವ ಔಷದಿಯನ್ನು ಜೊಲ್ಲುರಸದೊಂದಿಗೆ ನುಂಗಬೇಕು.

**ನಾಲಿಗೆ ಕೆಳಗೆ ಕರಗುವ ಮಾತ್ರೆಗಳು (ನುಂಗಬಾರದು, ಅಗಿಯಬಾರದು ಹಾಗೂ ಚೀಪಬಾರದು):**
ಇಂತಹ ಮಾತ್ರೆಗಳನ್ನು ನಾಲಿಗೆಯ ಕೆಳಗೆ ಇಟ್ಟುಕೊಳ್ಳಬೇಕು, ಅಲ್ಲಿಯೇ ಕರಗಿದ ಮಾತ್ರೆಯಿಂದ ಔಷದಿಗಳು ರಕ್ತನಾಳಗಳನ್ನು ಸೇರುತ್ತವೆ. ತನ್ಮೂಲಕ ರಕ್ತದಲ್ಲಿ ಸಮ್ಮಿಳಿತಗೊಳ್ಳತ್ತದೆ.

**“ಮಾತ್ರೆಗಳನ್ನು ತೆಗೆದುಕೊಳ್ಳುವ ಮೊದಲು, ಆ ಮಾತ್ರೆಯು ಮೇಲೆ ಹೇಳಿದ ಯಾವ ಗುಂಪಿಗೆ ಸೇರಿದೆ ಎಂದು ಖಚಿತ ಪಡಿಸಿಕೊಳ್ಳಿ, ತಿಳಿಯದಿದ್ದಲ್ಲಿ ನಿಮ್ಮ ವೈದ್ಯರನ್ನು ಅಥವಾ ಔಷದ ತಜ್ಞರನ್ನು ಸಂಪರ್ಕಿಸಿ”**

Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

Campaign for Awareness on Responsible Use of Medicines

# ಸಕಾಲಿಕ ಔಷಧ ಸೇವನೆಯ ಅಗತ್ಯತೆಗಳು






## ಔಷಧ ಸೇವನೆಯ ಪ್ರಮಾಣ ಮತ್ತು ಅವಧಿ

- ಔಷಧ ಪ್ರಮಾಣ ಮತ್ತು ಸೇವನೆಯ ಕಾಲಾವಧಿ ನಿಮ್ಮ ನೆನಪಿನಲ್ಲಿರಲಿ.
- ವೈದ್ಯರು ಶಿಫಾರಸು ಮಾಡಿದ ಪ್ರಮಾಣ ಮತ್ತು ಕಾಲಾವಧಿಯಲ್ಲಿ ಸಂಪೂರ್ಣವಾಗಿ ಔಷಧ ಸೇವಿಸುವುದು ರೋಗ ನಿವಾರಿಸುವಲ್ಲಿ ಅತಿ ಮುಖ್ಯವಾದ ಕ್ರಮ.
- ಕ್ಷಯ, ಏಡ್ಸ್, ಮಧುಮೇಹ, ಅಧಿಕ ರಕ್ತದೊತ್ತಡ ಮುಂತಾದ ಹಲವು ರೋಗಗಳ ಚಿಕಿತ್ಸೆಗೆ ಧೀರ್ಘಕಾಲ ಔಷಧ ಸೇವನೆಯ ಅಗತ್ಯವಿರುತ್ತದೆ. ಮದ್ಯಂತರದಲ್ಲಿ ಔಷಧ ಸೇವನೆಯನ್ನು ನಿಲ್ಲಿಸುವುದು ತಪ್ಪು ಮತ್ತು ಅಪಾಯಕರ
- ವೈದ್ಯರ ಸಂಗಢ ಸಮಾಲೋಚಿಸದೆ ಮದ್ಯಂತರದಲ್ಲಿ ಔಷಧ ಸೇವನೆಯನ್ನು ನಿಲ್ಲಿಸುವುದು ತಪ್ಪು ಮತ್ತು ಅಪಾಯಕರ.

## ಔಷಧ ಸೇವನೆಯ ಪ್ರಮಾಣ

- ಶಿಪಾರಸ್ಸು ಮಾಡಿದ ಪ್ರಮಾಣಕ್ಕಿಂತ ಹೆಚ್ಚು (ಎರಡು ಅಥವಾ ಮೂರು ಪಟ್ಟು) ಔಷಧ ಸೇವನೆಯು ಅಪಾಯಕರ.
- ಸಕಾಲಿಕವಾಗಿ ವೈದ್ಯರು ಹೇಳಿದ ಪ್ರಮಾಣದಲ್ಲಿ ಔಷಧ ಸೇವನೆ ಮಾಡುವುದು ರೋಗ ನಿವಾರಣೆಯಲ್ಲಿ ಅತಿ ಮುಖ್ಯವಾದ ಕ್ರಮ, ಹಾಗೊಂದು ವೇಳೆ ಸಕಾಲದಲ್ಲಿ ಔಷಧ ಸೇವಿಸಲು ಮರೆತರೆ, ಜ್ಞಾಪಿಸಿದ ತಕ್ಷಣ ಸೇವಿಸುವುದು ಉಪಯುಕ್ತ.

## ಸಕಾಲಿಕ ಔಷಧ ಸೇವನೆಗೆ ಅವಶ್ಯಕವಾದ ಮುನ್ನೆಚ್ಚರಿಕೆಗಳು

- ಔಷಧ ಸೇವನೆಗೆ ಅಗತ್ಯವಾದ ಸಲಹೆ, ಸೂಚನೆ, ಔಷಧಿಯ ಪ್ರಮಾಣ ಮತ್ತು ಸೇವನೆಯ ಅವದಿಯನ್ನು ಪಟ್ಟಿ ಮಾಡಿಡುವುದು ಅತ್ಯುತ್ತಮ ಕ್ರಮ.
- ಔಷಧ ಪಟ್ಟಿಯನ್ನು ಗೋಡೆಯ ಮೇಲೆ ಕಾಣುವಂತೆ ತೂಗು ಹಾಕುವುದು, ಸರಿಯಾದ ವೇಳೆಯಲ್ಲಿ ಔಷಧ ಸೇವಿಸುವಲ್ಲಿ ಸಹಕಾರಿಯಾಗಬಲ್ಲದು.
- ಅಲರಾಂ, ಕಂಪ್ಯೂಟರ್ ಅಥವಾ ಮೊಬೈಲ್ ಪೋನ್‌ಗಳ ಮುಖಾಂತರ ಅವಧಿಯನ್ನು ನೆನಪಿಡಬಹುದು ಮತ್ತು ಔಷಧ ಸೇವನೆಯ ಮರೆಯುವಿಕೆಯನ್ನು ತಪ್ಪಿಸಬಹುದು.
- ಒಂದಕ್ಕಿಂತ ಹೆಚ್ಚು ಔಷಧಿಗಳ ಸೇವನೆ ಅಗತ್ಯವಿರುವಾಗ ಪ್ರತಿ ಔಷಧಿಯನ್ನು ಪ್ರತ್ಯೇಕಿಸಿ, ಪ್ರತಿಯೊಂದು ಔಷಧಿಗೂ ಪ್ರತ್ಯೇಕ ಡಬ್ಬಗಳನ್ನು ಮೀಸಲಿಡುವುದರಿಂದ ಅಥವ ಪ್ರತಿಯೊಂದು ಔಷಧಿಯನ್ನು ಪ್ರತ್ಯೇಕ ಬಣ್ಣದಿಂದ ಗುರುತು ಮಾಡುವುದರಿಂದ ಔಷಧಿ ಸೇವನೆಯಲ್ಲಿನ ಅನಗತ್ಯ ಗೊಂದಲ ತಪ್ಪಿಸಬಹುದು.

**ನೆನಪಿಡಿ:** ಒಂದೇ ಬಾರಿಗೆ ಎರಡು ಪಟ್ಟು ಔಷಧಿ ಸೇವಿಸುವುದು ಅತ್ಯಂತ ಅಪಾಯಕರ.

Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

CARUM
Campaign for Awareness on Responsible Use of Medicines

# ಮಕ್ಕಳ ಔಷಧಿಗಳು

**ಬಹಳಷ್ಟು ಸಲ, ಔಷಧಿಗಳಿಗಿಂತ ನಿಮ್ಮ ಇರುವಿಕೆ, ಪ್ರೀತಿ ಹಾಗೂ ಖಾಳಜಿಗಳೇ ಮಕ್ಕಳ ಅನಾರೋಗ್ಯವನ್ನು ಶಮನ ಮಾಡಬಲ್ಲವು**



Image Credit: Clumsyclariss.blogspot.com

## ವೈದ್ಯರ ಆದೇಶವಿಲ್ಲದೆ ಮಕ್ಕಳಿಗೆ ಔಷದಿಗಳನ್ನು ಕೊಡಬೇಡಿ

- ✓ ಮಕ್ಕಳಿಗೆ ಔಷದಿಗಳನ್ನು ವೈದ್ಯರ ಆದೇಶದ ಮೆರೆಗೆ ಅಥವಾ ಔಷಧ ತಜ್ಞರ ಸಲಹೆಯಂತೆ ಕೊಡಬೇಕು.
- ✓ ಔಷಧಿಗಳ ಪ್ರಮಾಣವು ಮಕ್ಕಳ ದೇಹದ ತೂಕದ ಮೇಲೆ ಅವಲಂಬಿತವಾಗಿರುತ್ತದೆ. ಹಾಗಾಗಿ ಖಾಯಿಲೆಯ ಲಕ್ಷಣಗಳು ಒಂದೇ ಆಗಿದ್ದರೂ ಸಹ, ಬೇರೆ ಮಕ್ಕಳಿಗೆ ಆದೇಶಿತವಾಗಿರುವ ಔಷಧಿಗಳನ್ನು ಕೊಡಬಾರದು.
- ✓ ಪ್ರತಿ ಚಿಕ್ಕ ಅನಾರೋಗ್ಯಕ್ಕೂ ಮಕ್ಕಳಿಗೆ ಔಷಧಿಗಳನ್ನು ಕೊಡುವ ಚಟವನ್ನು ಬೆಳೆಸಬಾರದು. ಔಷಧಿಗಳ ರುಚಿ ಸಿಹಿಯಾಗಿದ್ದರೂ ಅವು ಸಿಹಿ ತಿಂಡಿಗಳಲ್ಲ,
- ✓ ರೋಗ ನಿವಾರಿಸುವ ಔಷಧಿಗಳೇ, ಆರೋಗ್ಯಕ್ಕೆ ಹಾನಿಯನ್ನು ತರಬಲ್ಲವು ಎಂಬುದನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡಿ. ಅಸ್ವಸ್ಥವಾದಗ ಮಾತ್ರ ಔಷಧಿಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಮನವರಿಕೆ ಮಾಡಿ.

## ಮಕ್ಕಳ ಮನಸ್ಸು ಚಂಚಲದಿಂದ ಕೂಡಿರುತ್ತದೆ

- ➢ ಮಕ್ಕಳಿಗೆ ಕಾಣಿಸುವಂತೆ ಅಥವಾ ಕೈಗೆ ಎಟಕುವಂತೆ ಔಷಧಿಗಳನ್ನು ಇಡಬೇಡಿ
- ➢ ಮಕ್ಕಳಿಗೆ ಕಾಣಿಸುವಂತೆ ಯಾವುದೇ ಔಷಧಿಗಳನ್ನು ತೆಗೆದುಕೊಳ್ಳಬೇಡಿ.
- ➢ ನಿಮ್ಮ ಔಷಧಿಗಳನ್ನು ತರಿಸಲು ಮಕ್ಕಳನ್ನು ಕಳಿಸಬೇಡಿ. ಇದು ಒಳ್ಳೆಯ ಕ್ರಮವಲ್ಲ.
- ➢ ಔಷಧಿಗಳು ಹಾಗೂ ಔಷಧಿಯ ಉಪಕರಣಗಳು (ಚುಚ್ಚುಮದ್ದಿನ ಸೂಜಿಗಳು ಹಾಗೂ ಔಷದ ನೀಡುವ ಉಪಕರಣಗಳು) ಮಕ್ಕಳ ಆಟಕ್ಕಲ್ಲ. ಖಾಲಿಯಗಿರುವ ಔಷಧಿಯ ಸೀಶೆಗಳನ್ನು, ಮಾತ್ರೆಗಳ ಸ್ಟ್ರಿಪ್ಗಳನ್ನು, ಚುಚ್ಚುಮದ್ದಿನ ನಳಿಕೆಗಳನ್ನು ಹಾಗೂ ಸೇದುವ ಉಪಕರಣಗಳನ್ನು ಆಡಲು ಕೊಡಬೇಡಿ.

**ವೈದ್ಯರ ಆದೇಶವಿಲ್ಲದೆ ಮಕ್ಕಳಿಗೆ ಔಷದಿಗಳನ್ನು ಕೊಡಬೇಡಿ**

## ನಿಯಮಗಳನ್ನು ಪಾಲಿಸಿ

- ✓ ಪ್ರತಿ ಮಗುವಿಗೂ ಒಂದು ಖಡತವನ್ನು ಮಾಡಿ, ಅದರಲ್ಲಿ ವೈದ್ಯರ ಆದೇಶಗಳನ್ನು ದಿನಾಂಕದ ಪ್ರಕಾರ ಜೋಡಿಸಿ. ಪ್ರತಿ ಸಲ ವೈದ್ಯರನ್ನು ಸಂಪರ್ಕಿಸುವಾಗ ಈ ಖಡತವನ್ನು ತೋರಿಸಿದರೆ ವೈದ್ಯರಿಗೆ ಮಗುವಿನ ಆರೋಗ್ಯದ ಪೂರ್ಣ ಚಿತ್ರಣ ದೊರೆಯುತ್ತದೆ ಹಾಗೂ ಸರಿಯಾದ ಔಷಧಿಗಳನ್ನು ಕೊಡಲು ಸಹಾಯಕವಾಗುತ್ತದೆ.
- ✓ ಮಗುವಿಗೆ ಯಾವುದೇ ಔಷಧಿಯ ಆಲರ್ಜಿ ಅಥವಾ ಇದ್ದಲ್ಲಿ ಅದನ್ನೂ ಖಡತದಲ್ಲಿ ನಮೂದಿಸಿ ಹಾಗೂ ವೈದ್ಯರಿಗೆ ತಿಳಿಸಿ.
- ✓ ಔಷಧಿಗಳನ್ನು ಮಕ್ಕಳಿಗೆ ಕೊಡುವ ಮೊದಲು, ವೈದ್ಯರ ಆದೇಶವನ್ನು ಪದೇ ಪದೇ ಚೆನ್ನಾಗಿ ಓದಿ ಅರ್ಥವಾಗದಿದ್ದಲ್ಲಿ ವೈದ್ಯರ ಅಥವ ಔಷದ ತಜ್ಞರ ಸಲಹೆಯನ್ನು ಮತ್ತೊಮ್ಮೆ ಕೇಳಿ ಪಡಿಯಿರಿ.
- ✓ ಒಂದು ಮಗುವಿನ ಔಷಧಿಯನ್ನು ಪ್ರತ್ಯೇಕವಾಗಿ ಮಗುವಿನ ಹೆಸರು ಬರೆದಿರುವ ಡಬ್ಬದೊಳಗೆ ಹಾಕಿ ಇಡಬೇಕು. ಇದರಿಂದ ಬೇರೆ ಮಕ್ಕಳ ಔಷಧಿಗಳ ಜೊತೆ ಬೆರೆಯುವುದು ತಪ್ಪುತ್ತದೆ.
- ✓ ಕತ್ತಲಲ್ಲಿ ಮಕ್ಕಳಿಗೆ ಔಷಧಿಗಳನ್ನು ಕೊಡಬಾರದು, ಏಕೆಂದರೆ ಕತ್ತಲಲ್ಲಿ ನೀವು ಕೊಡುವ ಔಷಧಿಗಳು ಸರಿಯಾದ ಔಷದವಲ್ಲದಿರಬಹುದು ಅಥವ ಸರಿಯಾದ ಪ್ರಮಾಣವಲ್ಲದಿರಬಹುದು.

Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

Campaign for Awareness on Responsible Use of Medicines

# ಗರ್ಬಿಣಿಯರ ಔಷಧ ಸೇವನೆಗೆ ಮುನ್ನೆಚ್ಚರಿಕೆಗಳು !



ನೀವು ಗರ್ಬಿಣಿಯಾಗಿದ್ದಲ್ಲಿ, ಅಥವಾ ಸದ್ಯದಲ್ಲೆ ಗರ್ಭ ಧರಿಸುವ ಆಲೋಚನೆಯಿದ್ದಲ್ಲಿ, ಔಷಧ ಪಟ್ಟಿಯನ್ನು ಸಿದ್ದಪಡಿಸುವ ಮುನ್ನವೇ ವೈದ್ಯರಿಗೆ ತಿಳಿಸಿ.

ತಾಯಿಯ ಸ್ವಾಥ್ಯಕ್ಕೆ ಮುಖ್ಯವಾಗಿ ಬೇಕಾಗಿರುವ ಕೆಲವು ಔಷಧಿಗಳು ಗರ್ಭದಲ್ಲಿನ ಶಿಶುವಿಗೆ ಭಾಗಶ: ಅಪಾಯಕಾರಿಯಾಗಬಹುದು.

ನೀವು ಗರ್ಭಿಣಿಯಾಗಿದ್ದಲ್ಲಿ, ನಿಮ್ಮ ವೈದ್ಯರಿಗೆ / ದಂತ ವೈದ್ಯರಿಗೆ / ಔಷಧ ತಜ್ಞರಿಗೆ ಹಾಗೂ ನರ್ಸ್‌ಗಳಿಗೆ ತಪಾಸಣೆ ಮುನ್ನವೇ ಮನವರಿಕೆ ಮಾಡಿ ತಿಳಿಸುವುದು ಕ್ಷೇಮ.

ಗರ್ಬಿಣಿಯರು ಯಾವುದೇ ಔಷಧಗಳನ್ನು (ಆಯುರ್ವೇದಿಕ್ / ಯುನಾನಿ / ಹೋಮಿಯೋಪಥಿಕ್ / ಸಿದ್ದ / ಆಲೋಪಥಿಕ್) ತೆಗೆದುಕೊಳ್ಳವ ಮುನ್ನ ವೈದ್ಯರ ಸಲಹೆ ಪಡೆಯಿರಿ.

ಆರೋಗ್ಯವಂತ ಮಗುವಿಗೆ

ಆರೋಗ್ಯವಂತ ತಾಯಿಯಾಗಿ

**ಮದ್ಯಪಾನ ಹಾಗೂ ಧೂಮಪಾನ**
ಗರ್ಭಿಣಿಯರಿಗೆ ಬೇಡದ ವ್ಯಸನಗಳು.

ಇವುಗಳು ನಿಮ್ಮ ಗರ್ಭದಲ್ಲಿನ ಶಿಶುವಿಗೆ ಅಪಾಯಕಾರಿ ಹಾಗೂ ಮರಣಾಂತಕಾರಿಯಾಗಿ ಪರಿಣಮಿಸಬಹುದು !

Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

Campaign for Awareness on Responsible Use of Medicines

# ಔಷಧಗಳ




# ಅನಪೇಕ್ಷಿತ ಪರಿಣಾಮಗಳು

**ಎರಡು ಮತ್ತು ಹೆಚ್ಚಿನ ಔಷಧಿಗಳನ್ನು ಒಮ್ಮೆಲೆ ಸೇವಿಸಿದಾಗ ಉಂಟಾಗಬಹುದಾದ ಸಂಬಾವ್ಯ ಪರಿಣಾಮಗಳು**

- ಒಂದಕ್ಕಿಂತ ಹೆಚ್ಚು ಔಷಧಿಗಳನ್ನು ಒಮ್ಮೆಲೆ ಸೇವಿಸಿದಾಗ ಪರಸ್ಪರ ವ್ಯತಿರಿಕ್ತ, ಅನಪೇಕ್ಷಿತ ಪರಿಣಾಮಗಳು, ತೊಡಕುಗಳು, ಲಾಭಕರ ಪರಿಣಾಮಗಳು ಉಂಟಾಗಬಹುದು.
- ವೈದ್ಯರು/ದಂತ ವೈದ್ಯರು/ಔಷಧ ತಜ್ಞರ ಸಲಹೆ ಮತ್ತು ಸೂಚನೆಗಳ ಮೇರೆಗೆ ಔಷಧವನ್ನು ಸೇವಿಸುವುದರಿಂದ ಅನಪೇಕ್ಷಿತ ಪರಿಣಾಮಗಳನ್ನು ತಡೆಗಟ್ಟಬಹುದು.
- ವೈದ್ಯರು/ದಂತ ವೈದ್ಯರು ಅಥವಾ ಔಷಧ ತಜ್ಞರನ್ನು ಪ್ರತಿಭಾರಿ ಭೇಟಿಯಾಗುವಾಗ ತಪ್ಪದೇ ವೈದ್ಯರ ಪ್ರತಿಯನ್ನು ಕೊಂಡೊಯ್ಯುವುದು ಮತ್ತು ಬಳಸುತ್ತಿರುವ ಔಷಧಿಗಳ ಬಗ್ಗೆ ವಿವರವಾಗಿ ತಿಳಿಸುವುದು ಕ್ಷೇಮಕರ.

  **ಉದಾ:** ಸಿಪ್ರೊಪ್ಲಾಕ್ಸಿಸಿನ್ ಮತ್ತು ಐಬುಪ್ರೊಪೇನ್ ಒಟ್ಟಾಗಿ ಸೇವಿಸುವುದರಿಂದ ಅಪಾಯಕಾರಿಯಾದ ಮೆದುಳಿನ ಸೆಳೆತ ಉಂಟಾಗುವುದು.

**ಔಷಧ ಮತ್ತು ಆಹಾರ ಒಟ್ಟಿಗೆ ಸೇವಿಸಿದಾಗ ಉಂಟಾಗಬಹುದಾದ ಸಂಭಾವ್ಯ ಪರಿಣಾಮಗಳು**

- ಕೆಲವು ಔಷಧಿಗಳು ಆಹಾರದೊಟ್ಟಿಗೆ ಸೇವಿಸಿದಾಗ ವ್ಯತಿರಿಕ್ತ, ತೊಡಕು ಅಥವಾ ಅನಪೇಕ್ಷಿತ ಪರಿಣಾಮಗಳು ಉಂಟಾಗಬಹುದು.
- ಔಷಧಿಗಳನ್ನು ಮದ್ಯ/ಇನ್ನಿತರ ಪಾನಿಯಗಳ ಒಟ್ಟಿಗೆ ಸೇವಿಸಿದಾಗ ಗಂಭೀರ ತೊಡಕುಗಳು ಉಂಟಾಗಬಹುದು. ಹಾಗಾಗಿ ಔಷಧಿಗಳನ್ನು ವೈದ್ಯರ/ಔಷಧ ತಜ್ಞರ ಸೂಚನೆ ಮತ್ತು ಸಲಹೆ ಮೇರೆಗೆ ಸೇವಿಸುವುದು.

  **ಉದಾ:** ಸಿಪ್ರೊಪ್ಲಾಕ್ಸಿನ್ ಎಂಬ ಔಷಧವು ಊಟದೊಟ್ಟಿಗೆ ಅಥವಾ ಹಾಲಿನ ಪದಾರ್ಥಗಳೊಂದಿಗೆ ಸೇವಿಸುವುದರಿಂದ ಭಾಗಶ: ನಿಷ್ಕ್ರಿಯಗೊಳ್ಳುವುದು.

  ಪ್ಯಾರಸಿಟಮಾಲ್ ಎಂಬ ನೋವು ನಿವಾರಕವು/ಜ್ವರ ನಿವಾರಕವು ಮದ್ಯದೊಂದಿಗೆ ಸೇವಿಸುವುದರಿಂದ ಯಕೃತ್ ಹಾನಿಗೊಳಗಾಗುವುದು.

**"ನಿಮ್ಮ ವೈದ್ಯರೊಡನೆ ತಪ್ಪದೇ ಸಮಾಲೋಚಿಸಿ, ಚರ್ಚಿಸಿ ಮತ್ತು ಔಷಧ ತಜ್ಞರ ಸಲಹೆಯಂತೆ ಬಳಸಿ"**

Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

Campaign for Awareness on Responsible Use of Medicines

# ಔಷಧ

## ಮತ್ತು

# ಜಾಹಿರಾತುಗಳು



**"ಜಾಹಿರಾತುಗಳಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ವಿಶ್ವಾಸಾರ್ಹವಾದುವೇ ಎಂದು ಖಚಿತಪಡಿಸಿಕೊಳ್ಳಿ"**

## ಜಾಹಿರಾತುಗಳ ಆಕರ್ಷಣೆಗೆ ಒಳಗಾಗದಿರಿ

**"ಜಾಹಿರಾತುಗಳನ್ನು ನಂಬಿ ಆರೋಗ್ಯವನ್ನು ಅಪಾಯಕ್ಕೊಡ್ಡಬೇಡಿ ಹಾಗೂ ಶ್ರಮದಾಯಿಕ ಹಣವನ್ನು ಕಳೆದುಕೊಳ್ಳಬೇಡಿ"**

- ನಂಬಿಕೆಗೆ ಯೋಗ್ಯವಲ್ಲದ/ಅವಿಶ್ವಾಸನೀಯ ಜಾಹಿರಾತುಗಳಿಂದ ಪ್ರೇರಿತವಾಗಿ ಸ್ವಯಂ ಚಿಕಿತ್ಸೆ ಮಾಡಿಕೊಳ್ಳುವುದು ಅಪಾಯಕಾರಿ
- ಕೆಲವು ಅಲೋಪಥಿಕ್ (**OTC** ಔಷಧಿಗಳು/ವೈದ್ಯರ ಚೀಟಿ ಇಲ್ಲದೆಯೂ ಬಳಸಬಹುದಾದ ಔಷಧಿಗಳು), ಆರ್ಯುವೇದಿಕ್, ಹೋಮಿಯೊಪಥಿಕ್ ಮತ್ತು ಯುನಾನಿ ಔಷಧಿಗಳ ಜಾಹಿರಾತುಗಳು ಕಾನೂನು ಬದ್ದವಾಗಿವೆ.
- **ಕೆಲವು ಸುಳ್ಳು ಜಾಹಿರಾತುಗಳು** ಗುಣಪಡಿಸಲಾಗದ ದೇಹ ದೌರ್ಬಲ್ಯಗಳಾದ ಬೋಳುತಲೆ, ಕೂದಲು ಉದುರುವುದು ಲೈಂಗಿಕ ದೌರ್ಬಲ್ಯ ಮಧುಮೇಹ, ಏಡ್ಸ್ ಮುಂತಾದ ರೋಗಗಳನ್ನು ಗುಣಪಡಿಸುವುದೆಂದು ಪ್ರತಿಪಾದಿಸುತ್ತವೆ.
- **ಯಾವುದೇ ಔಷಧಿಗಳು ಸಂಪೂರ್ಣವಾಗಿ ಸುರಕ್ಷಿತವಲ್ಲ**
  ಆಯುರ್ವೇದಿಕ್/ಹೋಮಿಯೊಪತಿ/ಯುನಾನಿ/ಸಿದ್ದ ಔಷಧಿಗಳು ಕೂಡ ಅಲೋಪಥಿಕ್ ಔಷಧಿಗಳಂತೆ ಸಂಬಾವ್ಯ ಅಪಾಯಗಳನ್ನು ಉಂಟುಮಾಡಬಹುದು.

## ಜಾಹಿರಾತುಗಳ ವಿಶ್ವಾಸಾರ್ಹತೆ ಮತ್ತು ಮುನ್ನೆಚ್ಚರಿಕೆಗಳು

- ಯಾವುದೇ ಜಾಹಿರಾತುಗಳನ್ನು ನಂಬುವ ಮುನ್ನ ಅವುಗಳ ವಿಶ್ವಾಸಾರ್ಹತೆ ಮತ್ತು ಯೋಗ್ಯತೆಯನ್ನು ಖಚಿತಪಡಿಸಿಕೊಳ್ಳಿ.
- ಜಾಹಿರಾತುಗಳು ಅಸಮಂಜಸ, ಆತಾರ್ಕಿಕ, ಅವೈಜ್ಞಾನಿಕ ಎನಿಸದ್ದಲ್ಲಿ ಮತ್ತು ಉತ್ಪನ್ನ ಸಮಸ್ಯೆಯಿದ್ದಲ್ಲಿ ತಕ್ಷಣ ಹತ್ತಿರದ ಔಷಧ ನಿಯಂತ್ರಣ ಕಛೇರಿಗೆ ದೂರು ದಾಖಲು ಮಾಡುವುದು.
- ಔಷಧಿಗಳನ್ನು ಬಳಸುವ ಮುನ್ನ ಎಲ್ಲಾ ಖರೀದಿಗಳ ಬಿಲ್ಲುಗಳು, ಕಂಪನಿಯ ಸಂಪರ್ಕ ವಿಳಾಸ, ಪೋನ್ ಸಂಖ್ಯೆಯನ್ನು ಸಂಗ್ರಹಿಸಿ ಕಂಪನಿಯು ನಂಬಲಾರ್ಹವಾದುದು ಎಂದು ಖಚಿತಪಡಿಸಿಕೊಳ್ಳಿ


Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org

CARUM
Campaign for Awareness on Responsible Use of Medicines

# ಔಷಧ
## ಮತ್ತು
# ಔಷಧ ಅಂಗಡಿ
## ಬಗ್ಗೆ ದೂರು ಇದ್ದಲ್ಲಿ ಯಾರನ್ನು ಸಂಪರ್ಕಿಸಬೇಕು?




### ಔಷಧ ಮಾರಾಟದ ನಿಯಮಗಳು

1. ಬಹುತೇಕ ಔಷಧಿಗಳನ್ನು ನೊಂದಾಯಿತ ಔಷಧ ತಜ್ಞರು, ವೈದ್ಯರ ಶಿಫಾರಸ್ಸಿನ ಮೇರೆಗೆ ಮಾರಾಟ ಮಾಡುವುದು ಕಾನೂನಿನ ಪ್ರಕಾರ ಖಡ್ಡಾಯ.
2. ಯಾವುದೇ ಪಾರ್ಮಸಿಯು ಗುಣಮಟ್ಟದ, ಅದಿಕೃತ ಔಷಧಿಗಳ ಸಂಗ್ರಹಣೆ / ದಾಸ್ತಾನು ಮತ್ತು ಮಾರಾಟ ಮಾಡಲು ಸ್ಥಳೀಯ ಔಷದ ನಿಯಂತ್ರಣ ಪ್ರಾದಿಕಾರದಿಂದ ಪರವಾನಗಿ ಪಡೆದಿರಬೇಕು.
3. ಎಲ್ಲಾ ಔಷಧಿಗಳನ್ನು (**OTC** ಔಷಧಿಗಳ ಹೊರತಾಗಿ) ವೈದ್ಯರ ಚೀಟಿಯ ಶಿಪಾರಸ್ಸಿನ ಮೇರೆಗೆ ಮಾರಾಟ ಮಾಡುವುದು ಕಾನೂನಿನ ನಿಯಮಗಳ ಪ್ರಕಾರ ಖಡ್ಡಾಯ.
4. ಔಷಧ ಅಂಗಡಿಯು ವ್ಯವಸ್ಥಿತವಾಗಿ ಮತ್ತು ಉತ್ತಮವಾಗಿ ನಿಯಮಗಳ ಪ್ರಕಾರವೇ ಕಾರ್ಯ ನಿರ್ವಹಿಸಬೇಕು. ಹಾಗೂ ಬಿಲ್ಲಿನ ಮೇಲೆ ನಮೂದಾದ ಬೆಲೆಗಿಂತ ಹೆಚ್ಚು ಹಣ ವಿದಿಸುವಂತಿಲ್ಲ.

### ದೂರು ದಾಖಲು ಮಾಡುವ ಸಂದರ್ಭಗಳು

1. ಯಾವುದೇ ಪಾರ್ಮಸಿ / ಔಷದ ತಜ್ಞರು ಖರೀದಿಯ ಬಿಲ್ಲನ್ನು ನಿರಾಕರಿಸುವುದು ಮತ್ತು ನಮೂದಾದ ಬೆಲೆಗಿಂತ ಹೆಚ್ಚು ಹಣಕ್ಕೆ ಬೇಡಿಕೆಯಿಡುವುದು.
2. ಅನಧಿಕೃತ ಪಾರ್ಮಸಿ ಅಥವಾ ಅನರ್ಹ ವ್ಯಕ್ತಿಗಳು ಔಷಧ ಮಾರಾಟದಲ್ಲಿ ತೊಡಗಿರುವುದು.
3. ಯಾವುದೇ ಪಾರ್ಮಸಿ ನಕಲಿ, ಅಶುದ್ದ ಅಥವಾ ದೋಷಪೂರಿತ ಔಷಧ ಸಂಗ್ರಹ ಮತ್ತು ಮಾರಾಟದಲ್ಲಿ ತೊಡಗಿರುವುದು.
4. ಮಾದಕ ಮತ್ತು ವ್ಯಸನಕ್ಕೆ ಕಾರಣವಾಗುವ ಔಷಧಿಗಳನ್ನು ವೈದ್ಯರ ಚೀಟಿಯಿಲ್ಲದೇ ಶಿಫಾರಸು ಮಾಡುವುದು / ಮಾರಾಟ ಮಾಡುವುದು.
5. ಈ ಮೇಲಿನ ಯಾವುದೇ ಸಂದರ್ಭದಲ್ಲಿ ಔಷಧಿ ಅಂಗಡಿಯ ಮಾಲಿಕರು ಮತ್ತು ಔಷಧ ತಜ್ಞರ ಮೇಲೆ ನೇರವಾಗಿ ದೂರು ದಾಖಲಿಸಿ

**ಔಷಧಿ ಅಥವಾ ಔಷಧ ಅಂಗಡಿ ಬಗ್ಗೆ ಯಾವುದೇ ದೂರು ಇದ್ದಲ್ಲಿ ಯಾರನ್ನು ಸಂಪರ್ಕಿಸಬೇಕು?**

- ✓ ಜಿಲ್ಲಾ ಔಷಧ ನಿಯಂತ್ರಕರು ಅಥವಾ ರಾಜ್ಯ ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಪ್ರಾಧಿಕಾರ
- ✓ ಜಿಲ್ಲಾ ಗ್ರಾಹಕರ ವೇದಿಕೆ
- ✓ ಆನಲೈನ್ ದೂರು ದಾಖಲು : www.core.nic.in


Supported by:
PHARMACY COUNCIL OF INDIA
Statutory body under the Ministry of Health & Family Welfare, Govt. of India
www.pci.nic.in

Issued in public interest by:
INDIAN PHARMACEUTICAL ASSOCIATION
COMMUNITY PHARMACY DIVISION
www.ipapharma.org